**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 30/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿ ಡಬ್ಲ್ಯೂ.1**

**ದಿನಾಂಕಃ 08.05.2024**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಇ ಎಂ ವಕೀಲರಿಂದಃ**

ಆರೋಪಿ ನನ್ನ ಮಾವ ಅಂದರೆ ನನ್ನ ಹೆಂಡತಿಯ ತಂದೆ. ನನ್ನ ಹೆಂಡತಿ ಹೆಸರು ಸುಜಾತ. ನಾನು ಶಿಕ್ಷಕ. ಪ್ರಸ್ತುತ ನಾನು ಹರಿಹರದ ತಾಲೂಕು ಹೊಳೆಸಿರಿಗೆರೆ ಗ್ರಾಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು 59 ವರ್ಷ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಹೆಂಡತಿ ಸುಜಾತಾ 2019 ರಲ್ಲಿ ತೀರಿಕೊಂಡಿದ್ದಾರೆ. ನನಗೆ 2 ಹೆಣ್ಣುಮಕ್ಕಳು. ನನ್ನ 2 ನೇ ಹೆಂಡತಿ ಹೆಸರು ಜಯಮ್ಮ. ಅವರಿಗೆ ಇನ್ನೂ ಮಕ್ಕಳಾಗಿಲ್ಲ. ನಾನು 2 ನೇ ಮದುವೆಯಾಗಿ 1 ½ ವರ್ಷಗಳಾಯಿತು. ಆರೋಪಿ ನನಗೆ ಸಂಬಂಧದಲ್ಲಿ ಮಾವ ಆಗಬೇಕೆಂಬ ವಿಷಯವನ್ನು ನನ್ನ ಪಿರ್ಯಾದಿಯಲ್ಲಿ ಬರೆಸಿದ್ದೇನೆ. ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ವ್ಯವಹಾರ ಇತ್ತು ಎಂದು ನುಡಿಯುತ್ತಾರೆ. ನನ್ನ ಮಾವ ಆರೋಪಿಗೆ 3 ಜನ ಹೆಣ್ಣು ಮಕ್ಕಳು ಹಾಗೂ 1 ಗಂಡು ಮಗ. ಆರೋಪಿ ಭದ್ರಾವತಿ ತಾಲೂಕು ಸನ್ಯಾಸಿ ಕೋಡಮಗ್ಗಿ ಗ್ರಾಮದಲ್ಲಿ ವಾಸವಾಗಿದ್ದಾರೆ. ನನ್ನ ಮತ್ತು ನನ್ನ ಮೊದಲನೇ ಹೆಂಡತಿ ಮಕ್ಕಳನ್ನು ನಾನೇ ಸಾಕುತ್ತಿದ್ದೇನೆ. ಹಿರಿಯ ಮಗಳು ಬಿಎಸ್ಸಿ ನರ್ಸಿಂಗ್ ಮತ್ತು ಇನ್ನೊಬ್ಬರು ದ್ವಿತೀಯ ಪಿಯುಸಿ ಓದುತ್ತಿದ್ದಾರೆ. ನನ್ನ 2 ನೇ ಮದುವೆಗಿಂತ ಮುಂಚೆ ನನ್ನ ಇಬ್ಬರು ಮಕ್ಕಳನ್ನು ನನ್ನ ಮಾವ ಅಂದರೆ ಆರೋಪಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ಆರೋಪಿಗೆ 3 ಎಕರೆ ಅಡಿಕೆ ತೋಟ, 1 ಎಕರೆ ಖುಷ್ಕಿ ಜಮೀನು ಮತ್ತು 1 ಆರ್ ಸಿಸಿ ಬಿಲ್ಡಿಂಗ್ ಇದೆ. ನಾನು ನನ್ನ ಮಾವನ ಮನೆಗೆ ಆಗಾಗ ಹೋಗುವುದಿಲ್ಲ. ನನಗೂ ಹಾಗೂ ಆರೋಪಿಗೂ ಸಂಬಂದ ಅಷ್ಟು ಸರಿಯಾಗಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕೃಷಿ ಮಾಡಲು ಜಮೀನಿನ ಮಾಲೀಕರಿಗೆ ಬ್ಯಾಂಕಿನವರು ಸಾಲ ನೀಡುತ್ತಾರೆ ಎಂದರೆ ಸರಿ. ಆರೋಪಿ ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಆರ್ಥಿಕವಾಗಿ ಸಬಲವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಒಂದು ಬಾರಿ ಸ್ಟ್ರೋಕ್ ಆಗಿತ್ತು ಎಂದರೆ ಸರಿ. ಆರೋಪಿಗೆ ಯಾವ ಭಾಗಕ್ಕೆ ಸ್ಟ್ರೋಕ್ ಆಗಿದೆ ಎಂದು ನನಗೆ ಗೊತ್ತಿಲ್ಲ.

ನನಗೆ ಬೇರೆ ಬೇರೆ ಶಾಲೆಗಳಿಗೆ ವರ್ಗಾವಣೆ ಆಗಿದೆ. ನನಗೆ ತಿಂಗಳಿಗೆ 80,000/- ರೂ ಸಂಬಳ ಇದೆ. ನನ್ನ ಖಾತೆಯಿಂದ 12,000/- ರೂ ಜಿಪಿಎಫ್ ಕಡಿತವಾಗುತ್ತದೆ. ಅದೇ ರೀತಿ 500/- ರೂ ಇನ್ಸುರೆನ್ಸ್ ಕಡಿತವಾಗುತ್ತದೆ. ನನ್ನ ಮನೆ ಖರ್ಚಿಗೆ ತಿಂಗಳಿಗೆ ಅಂದಾಜು 10,000/- ರೂ ಖರ್ಚಾಗುತ್ತದೆ. ನನಗೆ ತಿಂಗಳಿಗೆ 50-60 ಸಾವಿರ ರೂ.

ಉಳಿತಾಯವಾಗುತ್ತದೆ. ಸದರಿ ಉಳಿತಾಯದ ಹಣವನ್ನು ನನ್ನ ಬ್ಯಾಂಕ್ ಆಪ್ ಬರೋಡಾ ಖಾತೆಗೆ ಜಮೆ ಮಾಡುತ್ತೇನೆ. 2024 ನೇ ಏಪ್ರಿಲ್ ತಿಂಗಳಲ್ಲಿ ಒಟ್ಟು 3,70,000/- ರೂ ಉಳಿತಾಯವಾಗಿದೆ. ಮುಂದಿನ ಮುದ್ದತ್ತಿನಲ್ಲಿ ನನ್ನ ಬ್ಯಾಂಕ್ ಪಾಸ್ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಮ್ಮ ಪಿರ್ಯಾದಿಯಲ್ಲಿ, ಮುಖ್ಯ ವಿಚಾರಣೆ ಮತ್ತು ನೋಟೀಸ್ ನಲ್ಲಿ ನಿಮ್ಮ ಸಂಬಳ ಹಾಗೂ ಉಳಿತಾಯದ ಬಗ್ಗೆ ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ವಕೀಲರು ಕೇಳಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ಜಿಪಿಎಫ್ ಮತ್ತು ಕೆಜಿಐಡಿ ಹಣದ ಬಗ್ಗೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ರಿಂದ 4 ನ್ನು ಹೊರತು ಪಡಿಸಿ ನಿಮ್ಮ ಆದಾಯದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಒಂದು ಕ್ರಯ ಪತ್ರದ ದೃಡೀಕೃತ ನಕಲನ್ನು, ಕೆಜಿಐಡಿ ಯ ಮೆಚುರಿಟಿ ರೂ. 2,58,000/- ದ ದೃಡೀಕೃತ ನಕಲನ್ನು, 2018 ರಲ್ಲಿ ಕೆಜಿಐಡಿ ಯ ಮೆಚುರಿಟಿ ರೂ. 8,00,000/- ದ ದೃಡೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. 5 ಎಕರೆ 11 ಗುಂಟೆ ಜಮೀನು ನನ್ನ ಪಿತ್ರಾರ್ಜಿತ ಆಸ್ತಿಯ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮಂಜೂರು ಮಾಡಿ ಮುಂದೂಡಲಾಯಿತು. )

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.